ಸ್ವಾಪ್ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ನಮ್ಮ ಭಾಗದ ಪ್ರಯಾಣಿಕರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ರಾಮನಾಥ ರೈ: ಇತ್ತೀಚೆಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಲಾಭದಲ್ಲಿ ಇರತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಅದಷ್ಟು ಮೂಲಭೂತವಾಗಿ ಅಭಿವೃದ್ಧಿಯನ್ನು ಪಡಿಸತಕ್ಕಂಥ ಕೆಲಸವಾಗಿದೆ. ಉತ್ತಮ ಬಸ್ಸುಗಳನ್ನು ಹಾಕುವುದಾಗಿದೆ. ತಾವು ಹೇಳಿದ ಹಾಗೆ ಸಾರಸಗಟಾಗಿ ಎಲ್ಲವೂ ಸರಿ ಇಲ್ಲ ಎನ್ನುವ ಮಾತನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ತಮ್ಮ ಭಾವನೆಗಳನ್ನು ಏನು ವ್ಯಕ್ತಪಡಿಸಿದ್ದೀರಿ ಅದನ್ನು ಖಂಡಿತವಾಗಿ ಗಂಭೀರವಾಗಿ ಪರಿಗಣಿಸಿ, ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಅಪ್ಪಚ್ಚು ರಂಜನ್ ರವರೆ, ನಿಮ್ಮ ಪ್ರಶ್ನೆಗೆ ಸರ್ಕಾರದವರು ಮೂರು ವಾರ ಸಮಯ ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ. ಅವರು ಡಿಟೈಲ್ಸ್ ಕಲೆಕ್ಟ್ ಮಾಡಬೇಕು. ಅಧಿವೇಶನ ನಾಲ್ಕು ವಾರ ಕಾಲ ನಡೆಯಲಿದೆ. ಆಗ ಉತ್ತರ ತರಿಸಿಕೊಳ್ಳೋಣ. ಬಿಡಿ.

## ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಶಿಕ್ಷಕರ ಮತಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಗೆ ಮತದಾನದ ಹಕ್ಕು ನೀಡುವುದು

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

7(20) - ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ): ಮಾನ್ಯ ಕುಂದಗೋಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಯಾರು ನೀಡಲಾಗಿದೆ? ವಿವರಗಳನ್ನು ನೀಡುವುದು.

ಆ) ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತದಾನದ ಹಕ್ಕನ್ನು ನೀಡದಿರಲು ಕಾರಣಗಳೇನು?

ಇ) ಅವರಿಗೂ ಮತದಾನದ ಹಕ್ಕನ್ನು ಒದಗಿಸಲು ಸರ್ಕಾರವು ಯೋಚಿಸಿದೆಯೇ?

ಈ) ನೆರೆ ರಾಜ್ಯದಲ್ಲಿಯೂ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಗಳಲ್ಲಿ ನಮ್ಮ ರಾಜ್ಯದಲ್ಲಿ ಅನುಸರಿಸುತ್ತಿರುವ ನೀತಿಯನ್ನೇ ಪಾಲಿಸಲಾಗುತ್ತಿದೆಯೇ?

ಉ) ಹಾಗಿಲ್ಲದಿದ್ದಲ್ಲಿ ನೆರೆ ರಾಜ್ಯದ ನೀತಿಯನ್ನು ನಮ್ಮ ರಾಜ್ಯವು ಅನುಸರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ)

ಅ) 1950ನೇ ಇಸವಿಯ ಪ್ರಜಾಪ್ರಾತಿನಿಧ್ಯದ ಅಧಿನಿಯಮದ 27ನೇ ಪ್ರಕರಣದ 3ನೇ ಉಪ ಪ್ರಕರಣದ (ಬಿ) ಖಂಡದ ಪ್ರಕಾರ ಸೆಕೆಂಡರಿ ಶಾಲೆಗಿಂತ ಕಡಿಮೆ ಇಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಮತದಾನದ ಹಕ್ಕನ್ನು ನೀಡಲಾಗಿದೆ.

ಅ) 1950ನೇ - ಇಸವಿಯ ಪ್ರಜಾಪ್ರಾತಿನಿಧ್ಯದ ಅಧಿನಿಯಮದ ಅಡಿಯಲ್ಲಿ ಅವಕಾಶವಿರದ ಕಾರಣ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತದಾನದ ಹಕ್ಕನ್ನು ನೀಡಲು ಬರುವುದಿಲ್ಲ.

ಇ) ಇಲ್ಲ.

ಈ) 1950ನೇ ಪ್ರಜಾ ಪ್ರಾತಿನಿಧ್ಯ ಅಧಿನಿಯಮವು ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಶಿವಳ್ಳಿ ಚನ್ನಬಸಪ್ಪ: ಸತ್ಕಪ್ಪ ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ಕೇವಲ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಮಾತ್ರ ಮತದಾನದ ಹಕ್ಕನ್ನು ಕೊಡಲಾಗಿದೆ. ಇದರಿಂದ ರಾಜ್ಯದಲ್ಲಿ ಬಹುಸಂಖ್ಯಾತ ಪ್ರಾಥಮಿಕ ಶಾಲಾ ಶಿಕ್ಷಕರು ಈ ಚುನಾವಣೆಯಿಂದ ವಂಚಿತರಾಗಿದ್ದಾರೆ. ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರಷ್ಟೇ ವಿದ್ಯಾಭ್ಯಾಸವನ್ನು ಮಾಡಿದಂತ, ಪದವಿಯನ್ನು ಹೊಂದಿದಂತಹ ಅನೇಕ ಪ್ರಾಥಮಿಕ ಶಾಲಾ ಶಿಕ್ಷಕರು ಬಹುಸಂಖ್ಯಾತರು ಇದ್ದರೂ ಕೂಡ ಅವರಿಗೆ 1950ನೇ ನಿಯಮದಿಂದ ಅನ್ಯಾಯವಾಗುತ್ತಿದೆ. ಕಾರಣ ಸೀಮಿತ ವರ್ಗದ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಏನು ಮತದಾನದ ಹಕ್ಕನ್ನು ಕೊಡಲಾಗಿದೆ ಅದೇ ರೀತಿ ಬಹುಸಂಖ್ಯಾತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತದಾನದ ಹಕ್ಕನ್ನು ಕೊಡಬೇಕು. ಏಕೆಂದರೆ ಅವರ ಪರವಾಗಿ ಯಾವುದೇ ವಿಷಯವನ್ನು ಕೇಳುವುದಕ್ಕೆ ಪ್ರತಿನಿಧಿ ಇಲ್ಲದೆ ಇರುವಂತಹ ವ್ಯವಸ್ಥೆಯಾಗಿದೆ ಆದಕಾರಣ ಅವರಿಗೂ ಕೂಡ ಮತದಾನದ ಹಕ್ಕನ್ನು ಕೊಟ್ಟು ಪ್ರಾಥಮಿಕ ಶಾಲಾ ಶಿಕ್ಷಕರ ಕಷ್ಟ ಸಮಸ್ಯೆಗಳನ್ನು ಕೇಳುವುದಕ್ಕೆ ಅವರದೇ ಆದ ಒಬ್ಬ ಪ್ರತಿನಿಧಿ ಸಿಕ್ಕಂತಾಗುತ್ತದೆ. ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತದಾನದ ಹಕ್ಕನ್ನು ಕೊಡಲಾಗಿದೆ ಎನ್ನುವಂತಹ ವಿಷಯ ತಿಳಿದು ಬಂದಿದೆ. 1950 ನೇ ನಿಯಮ ಏನಿದೆ ಅದರಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯಾಯವಾಗುತ್ತದೆ ಆದುದರಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಮತದಾನದ ಹಕ್ಕನ್ನು ಕೊಡಬೇಕೆಂಬುದು ನನ್ನ ಆಪೇಕ್ಷೆ.

12.00 ಪಿ.ಎಂ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಯಾರ್ಯಾರು ಮತದಾನದ ಹಕ್ಕನ್ನು ಪಡೆಯಬೇಕೆನ್ನುವಂಥಾದ್ದರ ಬಗ್ಗೆ 1950ನೇ ಇಸವಿಯ ಪ್ರಜಾಪ್ರಾತಿನಿಧ್ಯದ ಅಧಿನಿಯಮದ ಪ್ರಕಾರ ತೀರ್ಮಾನವಾಗಿದೆ. ಇದನ್ನು ಬದಲಾಯಿಸಬೇಕಾದರೆ ರಾಜ್ಯಂಗದ ತಿದ್ದುಪಡಿಯಾಗಬೇಕಾಗುತ್ತದೆ. ರಾಜ್ಯಾಂಗದಲ್ಲಿ ಆರ್ಟಿಕಲ್ 171ರ ಪ್ರಕಾರ Constitution specifies that the electorate shall conist of teachers teaching in educational institutions not lower in standard than that of a secondary school. Hence, the Constitution has to be amended to include primary school teachers in the electorate." ಈ ಒಂದು ಅಡ್ಡಿ ಇರುವುದರಿಂದ ನಾವು ಇದನ್ನು ಮಾಡುವುದಕ್ಕಾಗುವುದಿಲ್ಲ, ತಾವು ಮಹಾರಾಷ್ಟ್ರದಲ್ಲಿ

ಮಾಡಿದ್ದಾರೆಂದು ಹೇಳಿದ್ದೀರಿ, ಅವರು ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಬೇಕಾಗುತ್ತದೆ, ತಾವು ಆಗಾಗ ಲೋಕಸಬೆಯ ಸದಸ್ಯರುಗಳನ್ನು ಸಭೆಗೆ ಕರೆಯುತ್ತೀರಿ, ಅವರ ಮುಖಾಂತರ ಅಮೆಂಡ್‌ಮೆಂಟ್ ಆಗಲು ಮೂವ್ ಮಾಡಿಸಿದರೆ ಒಳ್ಳೆಯದು, ಇದರ ಅಗತ್ಯತೆ ಇದೆ. ಇಲ್ಲಿ ಪ್ರಾಥಮಿಕ ಶಿಕ್ಷಕರು ಶಿಕ್ಷಕರಾಗಿರುವುದರಿಂದ ಅವರಿಗೂ ಮತದಾನದ ಹಕ್ಕು ಸಿಗಬೇಕಾಗುತ್ತದೆ. ಅದಕ್ಕೋಸ್ಕರ ತಾವು ಲೋಕಸಭೆಯ ಸದಸ್ಯರನ್ನು ಇದು ಅಮೆಂಡ್‌ಮೆಂಟ್ ಆಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪನವರು ಪ್ರಶ್ನೆ ಕಳುಹಿಸುವ ಮೂಲಕ ಈ ಕ್ಷೇತ್ರದಲ್ಲಿ ಮೂಲಭೂತ ಸುಧಾರಣೆ ತರಬೇಕೆನ್ನುವಂತಹ ದಿವ್ಯ ದೃಷ್ಟಿಯನ್ನು ಇಟ್ಟುಕೊಂಡು ಇದನ್ನು ಕಳುಹಿಸಿದ್ದಾರೆ, ನಾನು ಈ ತತ್ವವನ್ನು ಒಪ್ಪುತ್ತೇನೆ; in principle ನಾವು ಒಪ್ಪುತ್ತೇವೆ. ಕೇಂದ್ರ ಸರ್ಕಾರ ಈ ಸಂಬಂಧದಲ್ಲಿ ತಿದ್ದುಪಡಿಯನ್ನು ತರುವುದಕ್ಕೆ ಮುಂದೆ ಬರಬೇಕೆಂದು ನಾನು ಅವರಿಗೆ ಸೂಚನೆ ಮಾಡುತ್ತೇನೆ.

## ಚಿಂತಾಮಣಿ ಸರ್ಕಾರಿ ಪಾಲಿಟೆಕ್ನಿಕ್‌ಗೆ ಕುಡಿಯುವ ನೀರು ಒದಗಿಸುವುದು

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

9(17) - ಶ್ರೀ. ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

1) ಚಿಂತಾಮಣಿ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಚಿಂತಾಮಣಿ ನಗರಸಭೆಯ ಆಯುಕ್ತರವರಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ದಿನಾಂಕ: 26-12-2000 ಮತ್ತು 13-8-2001 ರಲ್ಲಿ ಪತ್ರಗಳನ್ನು ಬರೆದಿರುವುದು ನಿಜವೇ?

2) ಹಾಗಿದ್ದಲ್ಲಿ, ಕುಡಿಯುವ ನೀರು ಸರಿಯಾಗಿ ಒದಗಿಸದೇ, ನಿರ್ಲಕ್ಷ್ಯ ತೋರಿಸಿರುವಂತಹ ನಗರಸಭೆಯ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

3) ಪಾಲಿಟೆಕ್ನಿಕ್ ಪಕ್ಕದಲ್ಲಿ ಸಾರ್ವಜನಿಕ ಚರಂಡಿ ಇದ್ದು, ಖಾಸಗಿ ಬಸ್ ನಿಲ್ದಾಣ ಮತ್ತು ಇತರೆ ಭಾಗಗಳಿಂದ ಕಲ್ಮಷ ಹೊಂದಿದ ನೀರು ಈ ಚರಂಡಿಯಲ್ಲಿ ಸರಾಗವಾಗಿ ಹಾದುಹೋಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

1) ಹೌದು

2) ಕೊಳವೆ ಪೈಪುಗಳ ಮುಖಾಂತರ ನೀರು ಸರಬರಾಜು ಮಾಡುವ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದೆ. ಆದ್ದರಿಂದ, ನೌಕರರ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.